# ಮೈಸೂರು ವಿಶ್ವವಿದ್ಯಾನಿಲಯ

## ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ ಮೈಸೂರು–೫೭೦೦೦೬

## ಸಂವಿಧಾನ ಶಿಲ್ಪಿ ವಿಶ್ವರತ್ನ ಡಾ. ಬಿ.ಆರ್. ಅಂಬೇಡ್ಕರ್ ಅವರ ಜನ್ಮದಿನ ಮತ್ತು ವಿಚಾರ ಸಂಕಿರಣದ


'ನಮ್ಮ ಲಿಂಗತ್ವ ಪ್ರಶ್ನಿಸುವ ಹಕ್ಕು ಯಾರಿಗೂ ಇಲ್ಲ'




'ಶೋಷಣೆ ವಿರುದ್ಧ ಮೊಳಗಿದ ದನಿ'

ದಿನಾಂಕ 29–06–2024 ರಂದು ಸಂವಿಧಾನ ಶಿಲ್ಪಿ ವಿಶ್ವರತ್ನ ಡಾ. ಬಿ.ಆರ್. ಅಂಬೇಡ್ಕರ್ ಅವರ ಜನ್ಮದಿನ ಮತ್ತು ವಿಚಾರ ಸಂಕಿರಣದ ಅಂಗವಾಗಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ವತಿಯಿಂದ ಮಾನಸಗಂಗೋತ್ರಿಯ ಗ್ರಂಥಾಲಯದ ಮುಂಭಾಗದಲ್ಲಿರುವ ಡಾ.ಬಿ.ಆರ್. ಅಂಬೇಡ್ಕರ್ ಅವರ ಪುತ್ಥಳಿಯಿಂದ ಬೆಳ್ಳಿ ರಥದಲ್ಲಿ ಜನಪದ ಕಲಾ ತಂಡಗಳ ಮೂಲಕ ವಿದ್ಯಾರ್ಥಿಗಳು, ಸಂಸ್ಥೆಯ ಎಲ್ಲಾ ನೌಕರರು ಹಾಗೂ ಸಂಶೋಧಕರೆಲ್ಲರೂ ಸೇರಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯವರಗೆ ಅಂಬೇಡ್ಕರ್ ಅವರ ಭಾವ ಚಿತ್ರದ ಮೆರವಣಿಗೆ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲಾಯಿತು. ಈ ನಿಮಿತ್ತ ಆಯೋಜನೆಗೊಂಡಿದ್ದ ವಿಚಾರ ಸಂಕಿರಣದಲ್ಲಿ ನಾಡಿನ ಖ್ಯಾತ ಚಿಂತಕರಾದ ಬಂಜೆಗೆರೆ ಜಯಪ್ರಕಾಶ್ ಅವರು ಅಂಬೇಡ್ಕರ್--ಸಂವಿಧಾನ–ಸಮಾಜ: ಸಮಕಾಲೀನ ಸ್ಪಂದನೆ. ಈ ವಿಷಯವನ್ನು ಅವರು ಮಾತನಾಡುತ್ತಾ ವಿದ್ಯಾರ್ಥಿಗಳು, ಯುವಜನರು, ರೈತರು, ಬಡವರು, ಲೈಂಗಿಕ ಅಲ್ಪಸಂಖ್ಯಾತರು, ಪ್ರತಿಯೊಬ್ಬರು ಕೂಡ ಒಂದೊಂದು ದಿನಾಚರಣೆಯನ್ನ ಆಚರಿಸುತಾರೆ. ಯಾವ ಸಮಾಜದಲ್ಲಿ ಸಂಘರ್ಷ ತ್ರೀವ್ರಗೊಳ್ಳುತ್ತ ಹೋಗುತ್ತದೊ ಅದರಿಂದಾಗುವ ತೀವ್ರತೆಯೇ ನಿಜವಾದ ಆಚರಣೆಗಳು ಎಂದು ತಿಳಿಸಿದರು.

ಎರಡನೆ ಉಪನ್ಯಾಸವನ್ನು ಕರ್ನಾಟ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರಾದ ಡಾ.ಕವಿತಾ ರೈ ಅವರು ಅಂಬೇಡ್ಕರ್–ಸಂವಿಧಾನ–ಮಹಿಳೆ: ಸಮಕಾಲೀನ ಸ್ಪಂದನೆ. ಎಂಬ ವಿಷಯವನ್ನು ಕುರಿತಂತೆ ಮಾತನಾಡುತ್ತಾ ವರ್ತಮಾನದಲ್ಲಿ ಅಂಬೇಡ್ಕರ್ ಸಿದ್ಧಾಂತವನ್ನು ಜಗತ್ತಿನಾದ್ಯಂತ ಬೇರೆ ಬೇರೆ ನೆಲೆಯಲ್ಲಿ ಸಂವಿಧಾನಕ್ಕೆ ಸಜ್ಜುಗೊಳಿಸುವಂತಹ ಬೇರೆ ಬೇರೆ ವಿದ್ವಾಂಸರನ್ನ ನಾವು ಪಟ್ಟಿ ಮಾಡಿದ್ದೇವೆ. ಅವರುಗಳಲ್ಲಿ ಆನಂದ್ ತೇಲ್‌ತುಂಬ್ಡೆ, ಅನನ್ಯ ವಾಜಪೇಯಿ ಅಥವಾ ನಮ್ಮ ಜೊತೆಯಲ್ಲಿ ಅಂಬೇಡ್ಕರ್ ವಾದ ಮತ್ತು ಜಾತ್ಯತೀತ ನೆಲೆಯಲ್ಲಿ ಯುರೋಪಿನಾದ್ಯಂತ ಜಾತಿ ಅಂತ ಹೇಳುವುದು ಹೇಗೋ ನಮ್ಮ ಬೇರೆ ಬೇರೆ ನೆಲೆಯನ್ನ ನಾವು ನಮ್ಮನ್ನ ಮತ್ತೆ ಮತ್ತೆ ವ್ಯಾಪಿಸಿದೆ ಎಂದು ತಿಳಿಸಿದರು. ಸಾಮಾಜಿಕ ಕಾರ್ಯಕರ್ತರಾದ ಅಕ್ಕೈ ಪದ್ಮಶಾಲಿ ಅವರು ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಿ ಮಾತನಾಡುತ್ತಾ; ಅಂಬೇಡ್ಕರ್ ಅವರು ಸಂವಿಧಾನ ರಚನಾ ಸಮಿತಿಯ ಅಧ್ಯಕ್ಷರಾಗಿದ್ದು ತೃತೀಯ ಲಿಂಗಿಗಳನ್ನೂ ಮನದಲ್ಲಿಟ್ಟುಕೊಂಡು ನಮಗೂ ಸಮಾಜದಲ್ಲಿ ಎಲ್ಲರಂತೆ ಬದುಕುವ ಅವಕಾಶವನ್ನು ಕಲ್ಪಿಸಿರುವುದನ್ನ ಕಾಣಬಹುದು. 12 ನೆ ಶತಮಾನದ ಬಸವಣ್ಣನವರು ತಮ್ಮ ಅನುಭವಮಂಟಪದ ಮೂಲಕ ಅವರು ಅಂದಿನ ಸಮಾಜದಲ್ಲಿನ ಅಸಮಾನತೆಯನ್ನ ಹೋಗಲಾಡಿಸುತ್ತಾ ಅನುಭವ ಮಂಟಪದಲ್ಲಿ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಸ್ಥಾನಮಾನವನ್ನು ನೀಡಿ ಮಹಾಗುರುವಾದಂತೇ, ಮಹಾತ್ಮಗಾಂದೀಜಿ ಅವರು ಈ ದೇಶಕ್ಕೆ ಸ್ವಾತಂತ್ರ್ಯವನ್ನು ತಂದು ಮಹಾಗುರುವಾದಂತೆ, ಈ ದೇಶಕ್ಕೆ ಅತ್ಯಮೂಲ್ಯವಾದ ಸಂವಿಧಾನವನ್ನು ನೀಡಿ ಅಂಬೇಡ್ಕರ್ ಅವರು ವಿಶ್ವಗುರುವಾಗಿದ್ದಾರೆ ಎಂದು ತಿಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನ ವಹಿಸಿ ಮಾತನಾಡಿದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾದ ಪ್ರೊ. ಎನ್.ಕೆ ಲೋಲಾಕ್ಷಿ ಅವರು ಸಂವಿಧಾನದಲ್ಲಿನ ಮೂಲಭೂತ ಹಕ್ಕುಗಳಲ್ಲಿ ಅಂಬೇಡ್ಕರ್ ಅವರು ನೀಡಿರುವ ಸಮಾನತೆಯ ಹಕ್ಕು, ಸ್ವಾತಂತ್ರ್ಯದ ಹಕ್ಕುಗಳಿಂದಾಗಿ ಇಂದು ನಾಲ್ಕು ಗೋಡೆಯ ಮಧ್ಯದಲ್ಲಿದ್ದ ಮಹಿಳಾ ವರ್ಗ ಸಮಾಜದ ಮುಖ್ಯ ವಾಹಿನಿಗೆ ಬರಲು ಸಾಧ್ಯವಾಗಿದೆ. ಅಲ್ಲದೇ ತಳವರ್ಗದ ಜನರು ಇಂದು ಎಲ್ಲರಂತೆ ಜೀವಿಸಲು ಸಾಧ್ಯವಾಗಿದ್ದು ಅಂಬೇಡ್ಕರ್ ಎನ್ನುವ ಒಬ್ಬ ಮಹಾನ್ ಚೇತನ ನೀಡಿರುವ ಸಂವಿಧಾನದಿಂದ ಮಾತ್ರ ಸಾಧ್ಯವೆಂದು ಹೇಳಿದರು. ಮನುಷ್ಯ ಹೇಗಿರಬೇಕೆಂದರೆ ಸ್ವಾತಂತ್ರ್ಯ, ಸಮಾನತೆ, ಸಹೋದರತೆಯನ್ನು ನಂಬುವಂತಿರಬೇಕು ಎಂದು ತಿಳಿಸಿದರು. ಈ ವಿಚಾರ ಸಂಕಿರಣದ ಮೂಲಕ ಸಂಸ್ಥೆಯ ವಿದ್ಯಾರ್ಥಿಗಳು, ಸಂಶೋಧನಾ ವಿದ್ಯಾರ್ಥಿಗಳಿಗೆ ಸಂವಿಧಾನದ ಆಶಯವನ್ನ, ಪ್ರಜಾಪ್ರಭುತ್ವದ ಮೌಲ್ಯದ ಘನತೆಯನ್ನ ಹೆಚ್ಚಿಸುವಂತಹ ಅರ್ಥಪೂರ್ಣ ಕಾರ್ಯಕ್ರಮವಾಯಿತು.

ನಿರ್ದೇಶಕರು
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ